

## ಅವರಿಗೆಷ್ಟು ದಂಡ?

'ನಿಲ್ಲಿಸಬಾರದ ಜಾಗದಲ್ಲಿ ಬೈಕ್ ನಿಲ್ಲಿಸಿದ್ದಾನೆ' ಎಂದು ಪೊಲೀಸ್ ಇನ್‌ಸ್ಪೆಕ್ಟರ್ ತಿಮ್ಮನನ್ನು ಹಿಡಿದು 'ನೂರು ರೂಪಾಯಿ ದಂಡ ಕಟ್ಟು' ಎಂದು ಗದರಿಸಿದರು. ಆದರೆ ಜಾಣ ತಿಮ್ಮ 'ನಾನು ದಂಡ ಕಟ್ಟಲ್ಲ. ಬೇಕಿದ್ದರೆ ಕೋರ್ಟಿಗೆ ಹಾಕಿ' ಎಂದ. ಪೊಲೀಸರು ತಿಮ್ಮನನ್ನು ಕೋರ್ಟ್ ಮುಂದೆ ಹಾಜರುಪಡಿಸಿದರು.

'ನಿರ್ಬಂಧಿತ ಜಾಗದಲ್ಲಿ ಬೈಕ್ ನಿಲ್ಲಿಸಿದ್ದರಿಂದ ಇವರನ್ನು ಕೋರ್ಟಿಗೆ ಹಾಜರು ಪಡಿಸಿದ್ದೇವೆ, ಮಹಾಸ್ವಾಮಿ' ಎಂದು ಪೊಲೀಸರು ನಿವೇದಿಸಿಕೊಂಡರು.

ನ್ಯಾಯಾಧೀಶರು 'ಹೌದೇನೊ ತಿಮ್ಮಾ?' ಎಂದು ಕೇಳಿದರು.

ತಿಮ್ಮ: 'ಹೌದು ಸ್ವಾಮಿ, ಮೊಸರುಕೊಳ್ಳಲು ಕೇವಲ ಒಂದು ನಿಮಿಷ ನಿಲ್ಲಿಸಿದ್ದೆ ಮಹಾಸ್ವಾಮಿ.'

ಕೋರ್ಟು: 'ಹಾಗಾದರೆ ನೂರು ರೂಪಾಯಿ ದಂಡ ಹಾಕಲಾಗಿದೆ.'

ತಿಮ್ಮ: 'ಸ್ವಾಮಿ ಕೇವಲ ಒಂದು ನಿಮಿಷಕ್ಕೆ ಒಂದು ನೂರು ರೂಪಾಯಿ ದಂಡವಾದರೆ ಆ ಇನ್‌ಸ್ಪೆಕ್ಟರ್ ಬೆಳಗ್ಗಿನಿಂದಲೂ ತಮ್ಮ ಬೈಕನ್ನು ಅದೇ ಜಾಗದಲ್ಲಿ ನಿಲ್ಲಿಸಿದ್ದರು. ಅದನ್ನು ನೋಡಿಯೇ ನಾನೂ ನನ್ನ ಬೈಕನ್ನು ಅಲ್ಲೇ ನಿಲ್ಲಿಸಿದ್ದೆ. ಹಾಗಾದರೆ ಅವರಿಗೆಷ್ಟು ದಂಡ ಸ್ವಾಮಿ?'

ಗೊತ್ತಿದ್ದೂ ತಪ್ಪು ಮಾಡಿದ ಆ ಇನ್‌ಸ್ಪೆಕ್ಟರ್‌ಗೆ ಕೋರ್ಟು 5,000 ರೂಪಾಯಿ ದಂಡ ಹಾಕಿತು!

**ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ**

## ಪಟ್ಟಣದವಳು

ತರಕಾರಿಯವಳು ವನಜಮ್ಮನನ್ನು, 'ಏನ್ರವ್ವ, ನಿಮ್ಮ ಸೊಸೆ ಪಟ್ಟಣದವಳಾ?' ಎಂದು ಕೇಳಿದಳು.

ಆಶ್ಚರ್ಯಚಕಿತರಾದ ವನಜಮ್ಮ 'ಅರೆ, ನಿನಗೆ ಹೇಗೆ ಗೊತ್ತಾಯ್ತು?' ಎಂದರು.

ತರಕಾರಿಯವಳು, 'ಬುಟ್ಟೀಲಿ ಟೊಮೆಟೊ ಹಾಕಿಸಿಕೊಂಡು ಅದರ ಮೇಲೆ ಬೂದುಗುಂಬಳಕಾಯಿ ಇಟ್ಟುಕೊಂಡಾಗಲೇ ಗೊತ್ತಾಯ್ತು... ಕಣಮ್ಮ' ಎಂದಳು!

**ಎಂ.ಆರ್. ಮುಕುಂದ, ಬೆಂಗಳೂರು**



ಚಿತ್ರಗಳು: ಗಣೇಶ್ ಆಚಾರ್ಯ